**ಅಸಲು ದಾವಾ ಸಂಖ್ಯೆ: 1266/2018**

**ಪಿಡಬ್ಲೂ -1**

**ದಿಃ 02-03-2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆ ವಾದಿಯ ಪರ ವಕೀಲರಾದ ಶ್ರೀ. PKB ರವರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದ ಸಂಗತಿಗಳು ನಿಜವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಇರುತ್ತದೆ.

ನಾನು ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

ವಾದಿಯು ನನ್ನ ಹೆಸರಿಗೆ ಬರೆದುಕೊಟ್ಟ ವಿಶೇಷ ಅಧಿಕಾರ ಪತ್ರ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-1 ಎಂದು,

ದಿಃ 16-07-2007 ರ ಖರೀದಿ ಒಪ್ಪದ ಪತ್ರ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-2 ಎಂದು,

ನಿಪಿ-2 ರ ಮೇಲೆ ಅನಂತ ಉರ್ಫ ಪ್ರಕಾಶ ಕುಲಕರ್ಣಿ ಹಾಗೂ ಪರಪ್ಪ ಬೆಟಗೇರಿ ರವರು ಸಹಿ ಮಾಡಿರುತ್ತಾರೆ. ಸಾಕ್ಷಿ ಸದರಿ ಸಹಿಗಳನ್ನು ನೋಡಿ ಗುರುತಿಸಿದ ಕಾರಣ ಅವುಗಳನ್ನು ನಿಪಿ-2(ಎ) ಮತ್ತು 2(ಬಿ) ಎಂದು ಗುರುತಿಸಲಾಯಿತು.

ನಿಪಿ-2 ಕ್ಕೆ ಸಂಗಪ್ಪ ಹಳೇಮನಿ, ಮಂಜುನಾಥ ಸುರಗಾವಿ, ಪ್ರಭಾಕರ ಕರೋಶಿ, ಪುಟ್ಟಪಂತ ಕುಲಕರ್ಣಿ, ಅನಂತ ರವರ ಮಗ ಮದನ ಕುಲಕರ್ಣಿ ರವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಸದರಿ ದಾಖಲೆ ಆಗುವಾಗ ನಾನು ಸಹ ಹಾಜರಿದ್ದೆ.

ದಾವಾ ಸ್ವತ್ತಿಗೆ ಸಂಬಂಧಿಸಿದ 2006-07 ನೇ ಸಾಲಿನ ಪಹಣಿ ಪತ್ರ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-3 ಎಂದು,

ದಿಃ 26-07-2018 ರ ಕ್ರಯ ಪತ್ರದ ದೃಡೀಕೃತ ನಕಲು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-4 ಎಂದು,

ದಾವಾ ಸ್ವತ್ತಿಗೆ ಸಂಬಂಧಿಸಿದ 2017-18 ನೇ ಸಾಲಿನ ಪಹಣಿ ಪತ್ರ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-5 ಎಂದು,

1ನೇ ಪ್ರತಿವಾದಿಗೆ ಕಳುಹಿಸಿದ ನೋಟಿಸನ ಕಚೇರಿ ಪ್ರತಿ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-6 ಎಂದು, ಗುರುತಿಸಲಾಯಿತು.

**ವಕೀಲರು ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶವನ್ನು ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**